01487

# Foundation Course : KANNADA

## Term-End Examination

## June, 2010

## Course Code : FKD

*Time : 2 hours* *Maximum Marks : 50*

1. ಈ ಕೆಳಕಂಡ 4 (ನಾಲ್ಕು) ಪ್ರಶ್ನೆಗಳಲ್ಲಿ ಯಾವುದಾದರೂ 2 (ಎರಡು) ಪ್ರಶ್ನೆಗಳಿಗೆ ಉತ್ತರಿಸಿ : 2x10=20

   (a) 'ಸಂಧಿಕಾರ್ಯ' ಎಂದರೇನು ? ಕನ್ನಡ ಸಂಧಿ ಮತ್ತು ಸಂಸ್ಕೃತ ಸಂಧಿಗಳನ್ನು ಉದಾಹರಣೆ ಸಹಿತ ವಿವರಿಸಿ.

   (b) ಕಾರಂತರು ಕಾಲೇಜು ಬಿಟ್ಟು ಮಾಡಿದ ಕೆಲಸಗಳು ಯಾವುವು ? ಕಾರಂತರ ಶಿಕ್ಷಣ ಪದ್ಧತಿಯ ಸ್ಥೂಲ ಕಲ್ಪನೆ ಏನು ?

   (c) ಬಸವಣ್ಣನವರ ಕಲ್ಪನೆಯಲ್ಲಿ ಸ್ವರ್ಗ-ನರಕ ಮತ್ತು ದೇವಲೋಕ-ಮರ್ತ್ಯಲೋಕಗಳೆಂದರೆ ಯಾವುವು ? ಉದಾಹರಣೆ ಸಹಿತ ವಿವರಿಸಿ.

   (d) ವೈಯಕ್ತಿಕ ಪತ್ರಗಳ ಪ್ರಧಾನ ಅಂಗಗಳು ಯಾವುವು ? ನೀವು ನೋಡಿರುವ ಯಾವುದಾದರೂ ಒಂದು ಪ್ರೇಕ್ಷಣೀಯ ಸ್ಥಳದ ಮಹತ್ವವನ್ನು ಕುರಿತು ನಿಮ್ಮ ಸ್ನೇಹಿತನಿಗೆ ಒಂದು ಪತ್ರ ಬರೆಯಿರಿ.

2. ಈ ಕೆಳಕಂಡ ಪ್ರಶ್ನೆಗಳಲ್ಲಿ ಯಾವುದಾದರೂ 3 **(ಮೂರು)** ಪ್ರಶ್ನೆಗಳಿಗೆ ಉತ್ತರಿಸಿ : **3x5=15**

(a) 'ಸಮಾಸ' ಎಂದರೇನು ? ಕನ್ನಡದಲ್ಲಿ ಪ್ರಚುರವಾಗಿರುವ ಸಮಾಸಗಳು ಯಾವುವು ? ಉದಾಹರಣೆ ಸಹಿತ ವಿವರಿಸಿ.

(b) ಹಾಳು ಹಂಪೆಯನ್ನು ಕಂಡು ಅಂದು ಇಂದಿನ ಚಿತ್ರಗಳು ಲೇಖಕರ ಮನಃಪಟಲದ ಮೇಲೆ ಹೇಗೆ ಮೂಡಿವೆ ? ವಿವರಿಸಿ.

(c) ಕರ್ನಾಟಕ ಸಂಸ್ಕೃತಿಯನ್ನು ಕುರಿತು ಬರೆಯಿರಿ.

(d) "ಈಸಬೇಕು ಇದ್ದು ಜಯಿಸಬೇಕು" ಎಂಬುದರ ಅರ್ಥವೇನು ? ಇದನ್ನು ವಿವರಿಸಲು ಪುರಂದರದಾಸರು ಕೊಟ್ಟ ಹೋಲಿಕೆಗಳು ಯಾವುವು ? ವಿವರಿಸಿ.

(e) ಈ ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು ನಿಮ್ಮ ವಿಚಾರಗಳನ್ನು ಅಗ್ರಲೇಖನದ ರೂಪದಲ್ಲಿ ಬರೆಯಿರಿ :

(i) ನಿರುದ್ಯೋಗ ನಿವಾರಣೆ

(ii) ಮಹಿಳಾ ಸ್ವಾತಂತ್ರ್ಯ

3. ಈ ಭಾಗವನ್ನು ಕನ್ನಡಕ್ಕೆ ಅನುವಾದಿಸಿ : 5

For one who Knows the truth
Both earth and water are the same
For one who knows and speaks
The world is no rather than the faith
That he does not exist for us
Because Guheshwara is in all
O Sanganabasavanna

4. (a) ಕೆಳಗಿನ ಪದಗಳ ಲಿಂಗಗಳನ್ನು ಗುರುತಿಸಿ ಬರೆಯಿರಿ. 2

(i) ಸೀತೆ

(ii) ಕುರುಡ

(iii) ಗಾಳ

(iv) ನಾಯಿ

(b) ಕೆಳಗಿನ ಕ್ರಿಯಾಪದಗಳನ್ನು ಸೂಚಿಸಿದಂತೆ ಬದಲಾಯಿಸಿ : 2

(i) ವಸಂತ ಹಣ್ಣು ತಿನ್ನುತ್ತಾನೆ. (ಭೂತಕಾಲ)

(ii) ಗಾಡಿ ಬರುತ್ತಿದೆ. (ಭವಿಷ್ಯತ್ಕಾಲ)

(c) ಕೆಳಗಿನ ಗಾದೆಗಳ ಪೂರ್ಣ ರೂಪ ಬರೆಯಿರಿ : 2

(i) ನಾಯಿ ಬೊಗಳದರೆ __________ .

(ii) ಹಾಗಲ ಕಾಯಿಗೆ __________ ಸಾಕ್ಷಿ

(d) ಬಿಟ್ಟ ಸ್ಥಳಗಳನ್ನು ಸೂಕ್ತ ಶಬ್ದಗಳಿಂದ ಭರ್ತಿಮಾಡಿ : 4

(i) ದ.ರಾ. ಬೇಂದ್ರೆ ಅವರ ಕಾವ್ಯನಾಮ __________ .

(ii) ಶಿಶು ಮೋಹ __________ ಜನನಿ ಜನಕರ ಮೋಹ

(iii) ದಯವಿಲ್ಲದ __________ ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯು.

(iv) ರಾಯರು ಬಂದರು ಮಾವನ ಮನೆಗೆ __________ .